ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 14-18
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯಕ್ಕೆ ಕೆ.ವಿ. ತಿರುಮಲೇಶ ಅವರ ಬಹುಮುಖ ಕೊಡುಗೆ

**ಜಯಶೀಲ ಎಂ.ಎನ್[1] ಮತ್ತು ಪ್ರೊ. ಪುಟ್ಟಸ್ವಾಮಿ[2]**
[1]ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ.
[2]ಕನ್ನಡ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ.

**Abstract:**
*ಕನ್ನಡ ಸಾಹಿತ್ಯದ ಸಮಕಾಲೀನ ಬೆಳವಣಿಗೆಯಲ್ಲಿ ಕೆ.ವಿ. ತಿರುಮಲೇಶ ಅವರು ವಿಶಿಷ್ಟ ಸ್ಥಾನವನ್ನು ಹೊಂದಿರುವ ಬಹುಮುಖ ಸಾಹಿತ್ಯಿಕರಾಗಿದ್ದಾರೆ. ಕವಿ, ವಿಮರ್ಶಕ, ಅನುವಾದಕ, ಭಾಷಾ ಚಿಂತಕ ಹಾಗೂ ಅಧ್ಯಾಪಕರಾಗಿ ಅವರು ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಅವರ ಕಾವ್ಯಗಳಲ್ಲಿ ಆಧುನಿಕ ಜೀವನದ ಸಂಕೀರ್ಣತೆ, ಸಾಮಾಜಿಕ ಪ್ರಜ್ಞೆ ಮತ್ತು ಭಾಷಾ ಸಂವೇದನೆಗಳು ಪರಿಣಾಮಕಾರಿಯಾಗಿ ವ್ಯಕ್ತವಾಗಿವೆ. ವಿಮರ್ಶಾ ಕ್ಷೇತ್ರದಲ್ಲಿ ಸಾಹಿತ್ಯದ ಹೊಸ ಆಯಾಮಗಳನ್ನು ಪರಿಚಯಿಸುವ ಮೂಲಕ ಅವರು ಸೃಜನಶೀಲ ಚಿಂತನೆಗೆ ಉತ್ತೇಜನ ನೀಡಿದ್ದಾರೆ. ಅನುವಾದಗಳ ಮೂಲಕ ಕನ್ನಡ ಸಾಹಿತ್ಯವನ್ನು ಜಾಗತಿಕ ಸಾಹಿತ್ಯದೊಂದಿಗೆ ಸಂಪರ್ಕಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಈ ಲೇಖನವು ಕೆ.ವಿ. ತಿರುಮಲೇಶ ಅವರ ಸಾಹಿತ್ಯಿಕ ಸಾಧನೆಗಳು ಹಾಗೂ ಕನ್ನಡ ಸಾಹಿತ್ಯದ ಅಭಿವೃದ್ಧಿಯಲ್ಲಿ ಅವರ ಬಹುಮುಖ ಕೊಡುಗೆಗಳನ್ನು ವಿಶ್ಲೇಷಿಸುತ್ತದೆ.*

**Keywords:** *ಕೆ.ವಿ. ತಿರುಮಲೇಶ, ಕನ್ನಡ ಸಾಹಿತ್ಯ, ಆಧುನಿಕ ಕಾವ್ಯ, ಸಾಹಿತ್ಯ ವಿಮರ್ಶೆ, ಅನುವಾದ ಸಾಹಿತ್ಯ*

## ಪೀಠಿಕೆ

ಕನ್ನಡ ಸಾಹಿತ್ಯದ ಆಧುನಿಕ ಪರಂಪರೆಯಲ್ಲಿ ಕೆ.ವಿ. ತಿರುಮಲೇಶ ಅವರು ಅತ್ಯುತ್ತಮ ವಿಶಿಷ್ಟವಾದ ಸ್ಥಾನಮಾನವನ್ನು ಪಡೆದುಕೊಂಡಿದ್ದಾರೆ. ಇವರು ಕವಿ, ವಿಮರ್ಶಕ, ಅನುವಾದ, ಭಾಷಾಶಾಸ್ತ್ರಜ್ಞ ಮತ್ತು ಸಾಹಿತ್ಯಿಕ ಚಿಂತಕರಾಗಿ ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನೇಕ ರೀತಿಯ ಆಯಾಮಗಳಲ್ಲಿ ಸಾಹಿತ್ಯಿಕ ಕೊಡುಗೆಯನ್ನು ನೀಡಿದ್ದಾರೆ. ಇವರ ಸಾಹಿತ್ಯವು ಕೇವಲ ಸೃಜನಾತ್ಮಕ ಅಭಿವ್ಯಕ್ತಿಯಲ್ಲದೇ ಅದಕ್ಕಿಂತ ಬದಲಾಗಿ ಆಧುನಿಕ, ಆಧುನಿಕತೆ ಜೀವನದ ಸಂಕೀರ್ಣತೆ ಹಾಗೂ ಮಾನವ ಸಂಬಂಧಗಳ ಸೂಕ್ಷ್ಮತೆ ಮತ್ತು ಅತಿಸೂಕ್ಷ್ಮತೆ ಹಾಗೂ ಭಾಷೆಯ ವೈವಿಧ್ಯತೆಯನ್ನು ಅನಾವರಣಗೊಳಿಸುವಂತಹ ಬೌದ್ಧಿಕವಾದಂತಹ ಪ್ರಯತ್ನವಾಗಿದೆ.

ಕೆ.ವಿ. ತಿರುಮಲೇಶ ಅವರ ಸಾಹಿತ್ಯದಲ್ಲಿ ಕಾವ್ಯಗಳಲ್ಲಿ ಪ್ರಮುಖವಾಗಿ ನಮ್ಮ ಚಿಂತನೆಯ ಪ್ರಭಾವವು ಸ್ಪಷ್ಟವಾಗಿ ಕಾಣುತ್ತದೆ. ಅವರ ಸಾಹಿತ್ಯದಲ್ಲಿ ಕವಿತೆಗಳಲ್ಲಿ ಸಾಮಾನ್ಯವಾಗಿ ಭಾವನಾತ್ಮಕ ಅಭಿವ್ಯಕ್ತಿಗಿಂತಲೂ ಹೆಚ್ಚಿನದಾಗಿ ಚಿಂತನೆಯನ್ನು ಪ್ರಧಾನವಾಗಿ ಕಾಣಬಹುದು. ಮಾವನ ಅಸ್ಥಿತ್ವ, ಏಕಾಂತತೆ, ನಗರ ಜೀವನದ ಒತ್ತಡ, ಸಂಸ್ಕೃತಿಯ ಬದಲಾವಣೆ ಹಾಗೂ ಕಾಲದ ವೈಚಿತ್ರ್ಯಗಳನ್ನು ಅವರು ತಮ್ಮ ಕಾವ್ಯ ಸಾಹಿತ್ಯದ

**Please cite this article as:** ಜಯಶೀಲ, ಎಂ.ಎನ್ ಮತ್ತು ಪುಟ್ಟಸ್ವಾಮಿ. (2026). ಕನ್ನಡ ಸಾಹಿತ್ಯಕ್ಕೆ ಕೆ.ವಿ. ತಿರುಮಲೇಶ ಅವರ ಬಹುಮುಖ ಕೊಡುಗೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(2), 14–18

ಉದ್ದಕ್ಕೂ ಸೂಕ್ಷ್ಮವಾಗಿ ವ್ಯಕ್ತಪಡಿಸಿದ್ದಾರೆ. ಸರಳವಾದ ಪದಗಳಲ್ಲಿ ಗಂಭೀರ ಅರ್ಥಗಳನ್ನು ನಿರೂಪಿಸುವ ಅವರ ಶೈಲಿ ಕನ್ನಡ ಕಾವ್ಯ ಸಾಹಿತ್ಯಕ್ಕೆ ಹೊಸ ರೀತಿಯ ಆಯಾಮವನ್ನು ನೀಡಿದೆ.

ಕೆ.ವಿ. ತಿರುಮಲೇಶ ಅವರು ವಿಮರ್ಶೆ ಹಾಗೂ ವಿಮರ್ಶಕನಾಗಿ ಕನ್ನಡ ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿರುವುದು ಅತ್ಯಂತ ಮಹತ್ವದ್ದಾಗಿದೆ. ಇವರ ಸಾಹಿತ್ಯವನ್ನು ಕೇವಲ ಮನರಂಜನೆಯ ಸಾಧನವಾಗಿ ನೋಡದೆ, ಸಾಮಾಜಿಕ ಮತ್ತು ವೈಚಾರಿಕ ನೆಲೆಯ ಪ್ರಕ್ರಿಯೆಯಾಗಿ ಅವರು ಪರಿಗಣಿಸಿದ್ದಾರೆ. ಕೆ.ವಿ. ತಿರುಮಲೇಶ ಅವರ ವಿಮರ್ಶಾ ಲೇಖನಗಳಲ್ಲಿ ಆಳವಾದ ಅಧ್ಯಯನ, ತಾರ್ಕಿಕತೆ ಮತ್ತು ವಿಶ್ಲೇಷಣಾತ್ಮಕ ದೃಷ್ಟಿಯಲ್ಲಿ ಕಂಡು ಬರುತ್ತದೆ. ಕನ್ನಡ ಸಾಹಿತ್ಯಕ್ಕೆ, ವಿಮರ್ಶೆಗೆ ಅವರು ಹೊಸ ರೀತಿಯ ಚಿಂತನಾ ಮಾರ್ಗವನ್ನು ನೀಡಿದ್ದಾರೆ. ಹಾಗೆಯೇ ಪಾಶ್ಚಾತ್ಯ ಸಾಹಿತ್ಯ ಸಿದ್ಧಾಂತಗಳನ್ನು ಕನ್ನಡ ಸಾಹಿತ್ಯದೊಂದಿಗೆ ಸಂವಾದಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಯಶಸ್ವಿಯನ್ನು ಕಂಡಿದ್ದಾರೆ.

ಅನುವಾದ ಸಾಹಿತ್ಯ ಕ್ಷೇತ್ರದಲ್ಲಿಯೂ ಸಹ ಇವರು ತುಂಬಾ ಗಮನಾರ್ಹವಾದ ಕೆಲಸವನ್ನು ಸಾಹಿತ್ಯಕ್ಕೆ ನೀಡಿದ್ದಾರೆ. ಅವರು ಇತರ ಭಾಷೆಗಳ ಪ್ರಮುಖವಾದ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಮೂಲಕ ಕನ್ನಡಕ್ಕೆ ತಂದು ವಿಶ್ವ ಸಾಹಿತ್ಯವನ್ನು ಕನ್ನಡದ ಓದುಗರಿಗೆ ಪರಿಚಯ ಮಾಡಿಕೊಟ್ಟಿರುವುದನ್ನು ಕಾಣಬಹುದು. ಇವರ ಅನುವಾದಗಳಲ್ಲಿ ಮೂಲ ಕೃತಿಯ ಭಾವ ಮತ್ತು ಶೈಲಿಯನ್ನು ಸಮರ್ಪಕವಾಗಿ ಉಳಿಸಿಕೊಳ್ಳುವ ಅಂದರೆ ಮೂಲಕೃತಿಗೆ ಯಾವುದೇ ಮುಕ್ಕಾಗದಂತೆ ಅದರ ರಸವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆ. ಆದುದರಿಂದ ಕನ್ನಡ ಸಾಹಿತ್ಯ ವ್ಯಾಪ್ತಿ ಬಹುವಿಸ್ತಾರವಾಗಲು ಸಹಾಯಕವಾಗಿದೆ ಎಂದು ಹೇಳಬಹುದು.

ಕೆ.ವಿ. ತಿರುಮಲೇಶ ಅವರ ಸಾಹಿತ್ಯಗಳಲ್ಲಿ ಸಂಪೂರ್ಣವಾಗಿ ಸಮಾಜ ಮತ್ತು ಸಂಸ್ಕೃತಿಯ ಪ್ರತಿಬಿಂಬವೂ ಸೃಷ್ಟಿಯಾಗಿ ಕಾಣುತ್ತದೆ. ಅಂದರೆ ನಗರೀಕರಣವಾದ ಬದುಕು, ಮಧ್ಯಮವರ್ಗದ ಸಾಮಾನ್ಯ ಜನರ ಮನಸ್ಥಿತಿ, ಸಂಸ್ಕೃತಿ ಬದಲಾವಣೆ ಹಾಗೆಯೇ ವ್ಯಕ್ತಿಯ ನಡುವಿನ ಒಳಸಂಘರ್ಷಗಳು, ಜಗಳಗಳು ಇವುಗಳನ್ನು ಅವರ ಸಾಹಿತ್ಯದಲ್ಲಿ ಬಹಳ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ. ಆದುದರಿಂದ ಕೆ.ವಿ. ತಿರುಮಲೇಶ ಅವರ ಸಾಹಿತ್ಯವು ಓದುಗರನ್ನು ಕೇವಲ ರಂಜಿಸುವುದಲ್ಲದೆ ಅವರು ಸ್ವ–ಚಿಂತನೆಗೆ ಒಳಗು ಮಾಡುವಂತೆ ಪ್ರೇರೇಪಿಸುತ್ತದೆ.

ಕೆ.ವಿ. ತಿರುಮಲೇಶ ರವರು ಭಾಷಾಶಾಸ್ತ್ರಜ್ಞರಾಗಿ ಅವರು ಕನ್ನಡ ಭಾಷೆಯ ಸ್ವರೂಪ ಬಳಕೆ ಮತ್ತು ಭಾಷೆಯ ಅಭಿವ್ಯಕ್ತಿ ವೈಶಿಷ್ಟ್ಯಗಳನ್ನು ಸ್ಥೂಲವಾಗಿ ಅಧ್ಯಯನ ಮಾಡಿದ್ದಾರೆ. ಅವರು ಭಾಷೆಯ ಬಗೆಗಿನ ಸೃಜನಾತ್ಮಕ ಬಳಸುವ ಮೂಲಕ ಸಾಹಿತ್ಯದಲ್ಲಿ ಹೊಸ ರೀತಿಯ ಪ್ರಯೋಗಗಳನ್ನು ಮಾಡಿದ್ದಾರೆ. ಕೆ.ವಿ. ತಿರುಮಲೇಶರ ಬರವಣಿಗೆಯಲ್ಲಿ ಭಾಷೆಯ ಸೌಂದರ್ಯ ಮತ್ತು ಬೌದ್ಧಿಕತೆಯ ಸಮನ್ವಯಗೊಂಡಿರುವುದನ್ನು ನೋಡಬಹುದು.

ಕನ್ನಡ ಮತ್ತು ಆಂಗ್ಲಭಾಷೆ, ಎರಡೂ ಭಾಷೆಗಳಲ್ಲಿ ಬರಹವನ್ನು ಬರೆದಿದ್ದಾರೆ.

- ಆಧುನಿಕ ಜೀವನದ ಅನುಭವಗಳು
- ಸಾಮಾನ್ಯ ಮನುಷ್ಯನ ಬದುಕಿನ ಚಿತ್ರಣ
- ತಾತ್ವಿಕವಾದ ಚಿಂತನೆಗೆ ಹಚ್ಚುವುದು.
- ಇವರ ಭಾಷೆಯಲ್ಲಿ ಸರಳವಾದ ಭಾಷೆಯನ್ನು ಬಳಸಿರುವುದು ಮುಖ್ಯವಾಗಿದೆ.
- ಸಾಮಾಜಿಕ ಮತ್ತು ಸಂಸ್ಕೃತಿಯ ಬಗ್ಗೆ ಹೆಚ್ಚು ಅಧ್ಯಯನಕ್ಕೆ ಒತ್ತು ನೀಡಿದ್ದಾರೆ.

ಕೆ.ವಿ. ತಿರುಮಲೇಶ ಅವರು ತಮ್ಮ ಸಾಹಿತ್ಯದ ಉದ್ದಕ್ಕೂ ಆಧುನಿಕ ಚಿಂತನೆ, ಭಾಷೆಯ ಮೇಲಿನ ಕ್ರಿಯಾಶೀಲತೆ ಮತ್ತು ಮಾನವನ ಜೀವನದ ಸೂಕ್ಷ್ಮ ಅನುಭವಗಳನ್ನು ಪ್ರಮುಖವಾಗಿ ಕಟ್ಟಿಕೊಟ್ಟಿದ್ದಾರೆ. ಕೆ.ವಿ. ತಿರುಮಲೇಶ ಅವರ ಸಾಹಿತ್ಯದ ಮುಖ್ಯ ಕ್ಷೇತ್ರಗಳು:

- ಆಧುನಿಕ ಕನ್ನಡ ಕಾವ್ಯದಲ್ಲಿ ವಿಭಿನ್ನ ಶೈಲಿಯನ್ನು ಬಳಸಿಕೊಂಡಿದ್ದಾರೆ.
- ಕತೆ ಮತ್ತು ಕಾದಂಬರಿಯ ರಚನೆಯಲ್ಲಿ ಸಹ ಇವರು ವಾಸ್ತವದ ಜಗತ್ತಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಮಾನವ ಸಂಬಂಧಗಳು ಮತ್ತು ಸಮಾಜದಲ್ಲಿನ ಜನಸಾಮಾನ್ಯರ ಬಗೆಗಿನ ವೈಚಾರಿಕತೆಯನ್ನು ಕಟ್ಟಿಕೊಟ್ಟಿದ್ದಾರೆ.
- ಹಾಗೆಯೇ ಕೆ.ವಿ. ತಿರುಮಲೇಶ ಅವರು ಸಾಹಿತ್ಯ ಕೃಷಿಯ ಜೊತೆಗೆ ಬರವಣಿಗೆಯನ್ನು ತಿದ್ದುವುದರ ಮೂಲಕ ಎಚ್ಚರಗೊಳಿಸುವಂತಹ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಆದ್ದರಿಂದ ಅವರು ತಮ್ಮ ಸಾಹಿತ್ಯ ರಚನೆಯ ಜೊತೆಗೆ ವಿಮರ್ಶೆಗೆ ಒತ್ತನ್ನು ನೀಡಿದರು. ಅವರು ತಮ್ಮ ವಿಮರ್ಶಾ ಸಾಹಿತ್ಯದ ಒಳಗೆ ಸಾಹಿತ್ಯ ಮತ್ತು ಭಾಷಿಕ ಮತ್ತು ಭಾಷಾ ಅಧ್ಯಯನದಲ್ಲಿ ಆಳವಾದ ಚಿಂತನೆಯನ್ನು ಮಾಡುವುದರೊಂದಿಗೆ ಸಾಹಿತ್ಯವನ್ನು ರೂಪಿಸಿದ್ದಾರೆ.

ಕೆ.ವಿ. ತಿರುಮಲೇಶ ಅವರು ತಮ್ಮ ಸಾಹಿತ್ಯವನ್ನು ಗಟ್ಟಿಗೊಳಿಸುವ ಮತ್ತು ಬೆಸೆಯುವ ಸಂದರ್ಭದಲ್ಲಿ ಅವರು ಕನ್ನಡ ಮತ್ತು ಇಂಗ್ಲಿಷ್ ಭಾಷೆ ಹಾಗೂ ಇನ್ನಿತರ ಭಾಷೆಗಳ ನಡುವೆ ಅನುವಾದವನ್ನು ಮಾಡುವುದರೊಟ್ಟಿಗೆ ಕನ್ನಡ ಮತ್ತು ಇನ್ನಿತರ ಬೇರೆ ಭಾಷೆಗಳಿಗೆ ಸೇತುವೆಯನ್ನು ನಿರ್ಮಾಣ ಮಾಡಿ ಅವರು ಕನ್ನಡದ ಓದುಗರಿಗೆ ಬೇರೆ ಭಾಷೆಯ ಬಗ್ಗೆ ಆಸಕ್ತಿ ಬರುವಂತೆ ಮಾಡಿದ್ದಾರೆ.

ಭಾಷೆಯ ರಚನೆ ಮತ್ತು ಭಾಷಾ ಬಳಕೆಯ ಅಧ್ಯಯನದಲ್ಲಿಯೂ ಸಹ ಕೆ.ವಿ. ತಿರುಮಲೇಶ ಅವರು ತಮ್ಮ ವೃತ್ತಿ ಬದುಕಿನ ಸಂದರ್ಭದಲ್ಲಿ ಅಂದರೆ ಅವರು ಹೈದರಾಬಾದ್‌ನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದು ಹಾಗೂ ವಿದೇಶಿ ಭಾಷೆಗಳ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾಗಿಯೂ ಅವರು ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಅತ್ಯುನ್ನತವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ.

ಆಧುನಿಕತೆಯ ಹೊಸ ಚಿಂತನೆಯ ರಾಜಕೀಯ ಮತ್ತು ಪಾಶ್ಚಿಮಾತ್ಯ ವಿಚಾರವಾದ ಹಾಗೂ ಸಂಪ್ರದಾಯದ ವಿರೋಧಿಪ್ರಜ್ಞೆ ಇವುಗಳ ಸಾಮಾಜಿಕ ಪ್ರಜ್ಞೆಯಾಗಿ ವೈಯುಕ್ತಿಕ ತತ್ವವಾಗಿ ಅಭಿವೃದ್ಧಿ, ಪಡೆದುಕೊಳ್ಳುವ ಸಂದರ್ಭದಲ್ಲಿ ತಿರುಮಲೇಶರು ತಮ್ಮ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡರು. ಸುಮಾರು ದಶಕಗಳ ಕಾಲ ಸಾಹಿತ್ಯದ ಕೃಷಿ ಮಾಡಲು ತೊಡಗಿಸಿಕೊಳ್ಳುವುದರ ಜೊತೆಗೆ ಸಮಾಜವನ್ನು ತಿದ್ದುವ ಕೆಲಸವನ್ನು ಮಾಡುತ್ತಾ ಜೊತೆ ಜೊತೆಗೆ ಜನಸಾಮಾನ್ಯರಿಗೆ ಅರ್ಥವಾಗುವ ನಿಟ್ಟಿನಲ್ಲಿ ಸಾಹಿತ್ಯವನ್ನು ರಚಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ಅಂದರೆ ಕಾವ್ಯ, ಕಥೆ, ಕಾದಂಬರಿ, ಪ್ರಬಂಧ, ಅನುವಾದ ಸಾಹಿತ್ಯ, ವಿಮರ್ಶಾ ಸಾಹಿತ್ಯ ಹೀಗೆ ಎಲ್ಲಾ ರೀತಿಯ ಸಾಹಿತ್ಯ ಕ್ಷೇತ್ರದಲ್ಲಿಯೂ ಸಹ ತಾವು ಕೈಚಾಚುವುದರೊಟ್ಟಿಗೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಗಮನಾರ್ಹವಾದ ಕೊಡುಗೆಯನ್ನು ನೀಡಿದ್ದಾರೆ.

ಪ್ರತಿಯೊಬ್ಬ ಮನುಷ್ಯನ ಶುದ್ಧ ಸಮಾನತೆಯ ಆತನ ಆಯ್ಕೆಯ ಸ್ವಾತಂತ್ರ್ಯದಲ್ಲಿ ಹಬ್ಬಿಕೊಳ್ಳುವ ಸೂಕ್ಷ್ಮಚಿತ್ರಣ ಪ್ರತಿಮಾತ್ಮಕವಾಗಿ ಅಭಿವ್ಯಕ್ತಗೊಂಡಿದೆ ಎಂಬುದನ್ನು ತಿಳಿಸಿದ್ದಾರೆ. ಮನುಷ್ಯನ ಮಾನಸಿಕ ಆಯ್ಕೆಗಳ ಅನೇಕ ಅವಸ್ಥೆಗಳನ್ನು ಆಧುನಿಕ ಕಾಲದ ಸ್ವ–ವಿವರದ ಅಸ್ಮಿತೆಯ ದ್ವಂದ್ವಗಳ ನಡುವೆ ಹಾದು ಹೋಗುವ ಕಾವ್ಯ ಅನುಭವಗಳನ್ನು, ವಿಚಾರಗಳನ್ನು ಸಾಹಿತ್ಯದ ಮೂಲಕ ಪ್ರತಿಮೆಗಳನ್ನು ಪ್ರತಿಪಾದಿಸಿದ್ದಾರೆ. ಸಮಾಜದಲ್ಲಿ ಮನುಷ್ಯ ಸಂಬಂಧಿತ ಭಿನ್ನ–ಭಿನ್ನ ಅಭಿಪ್ರಾಯಗಳನ್ನು, ಧ್ವನಿಗಳನ್ನು ಸಂಕೇತಗಳನ್ನಾಗಿ ತಾತ್ವಿಕಗೊಳಿಸುವುದು ಸುಲಭದ ವಿಚಾರವಲ್ಲ. ಆದ್ದರಿಂದ ಕೆ.ವಿ. ತಿರುಮಲೇಶರು ತಮ್ಮ ಸಾಹಿತ್ಯದಲ್ಲಿ ವಸ್ತು ಮತ್ತು ವಾಸ್ತವತೆಗೆ ಪ್ರತಿರೂಪದ ಶಕ್ತಿಯಾಗಿ ಯಶಸ್ವಿಗೊಳಿಸಿದ್ದನ್ನು ಕಂಡುಕೊಂಡಿದ್ದಾರೆ.

ಕೆ.ವಿ. ತಿರುಮಲೇಶರು ತಮ್ಮ ಸಾಹಿತ್ಯದಲ್ಲಿ ಕ್ರಿಯಾಶೀಲತೆ ಎನ್ನುವುದು ವ್ಯಕ್ತಿತ್ವಕ್ಕೆ ಅಂಟಿದ ಸ್ವಭಾವತಃವಾದ ಕಾವ್ಯದ ದೃಷ್ಟಿಯಲ್ಲಿ ಕಾವ್ಯ ಕಟ್ಟುವ ಸೃಜನಶೀಲ ಪಾಂಡಿತ್ಯ ಎನ್ನಬಹುದಾದ ಬೌದ್ಧಿಕ ವ್ಯಕ್ತಿತ್ವ. ಅದು ಪ್ರದರ್ಶನಗೊಳ್ಳದ ರೀತಿಯಲ್ಲಿ ಅದಮ್ಯವಾಗಿ ವಿಸ್ತೃತಗೊಂಡಿರುತ್ತದೆ. ಅಕ್ಷರ ಲೋಕದ ಅಂಚಿನಲ್ಲಿ ಇವರು ಗದ್ಯ ಮತ್ತು ವಿಮರ್ಶೆ ಎರಡಕ್ಕೂ ತಮ್ಮದೇ ಆದ ಭಾಷಾ ಒಳನೋಟವನ್ನು ನೀಡಿದ್ದಾರೆ.

ಸೃಜನಶೀಲ ಲೇಖಕನೊಬ್ಬ ಸಾಹಿತ್ಯ ಕೃಷಿ ಕಾರ್ಯಕ್ಕೆ ಕೈ ಹಾಕಿದಾಗ ಭಾಷೆಗೆ ಹಾಗೂ ಬರವಣಿಗೆಗೆ ತೆರನಾದ ಆಸಕ್ತಿ ತೋರುವುದು ಸಹಜವಾಗಿರುತ್ತದೆ. ಕೆ.ವಿ. ತಿರುಮಲೇಶ ಅವರು ಕೂಡ ತಮ್ಮ ಅಧ್ಯಾಯದಲ್ಲಿ ಹೊಸ ವಿಚಾರಗಳನ್ನು ಸೃಷ್ಟಿಸಿ ಕನ್ನಡ ಸಾಹಿತ್ಯಕ್ಕೆ ನೀಡುವುದರ ಜೊತೆಗೆ ಉತ್ತಮವಾದ ಉದ್ದೇಶಗಳನ್ನು ಹೊಂದಿ ಸಾಹಿತ್ಯ ಕೃಷಿ ಮಾಡುವುದರೊಟ್ಟಿಗೆ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ರೀತಿಯ ಜ್ಞಾನ ಸಂಚಲನವನ್ನು ಸೃಷ್ಟಿಸಿದ್ದಾರೆ. ಭಾಷೆಯ ಲೋಕಾತೀತ ಸತ್ವವನ್ನು ಮತ್ತು ತನ್ಮಯತೆಯನ್ನು ಹೊಸಬಗೆಯ ಆಲೋಚನೆಯೊಂದಿಗೆ ವಿಭಿನ್ನ ಸಾಂಸ್ಕೃತಿಕ ಜಗತ್ತನ್ನು ಸೃಷ್ಟಿಸಿ ಪರಿಚಯಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ಹೀಗೆ ವಿನ್ಯಾಸ ವಿಚಾರಗಳ ಓದು ಮತ್ತು ಜ್ಞಾನದ ತಿರುಳನ್ನು ತಮ್ಮ ಬರವಣಿಗೆಯ ಹಲವು ಹಂತಗಳಲ್ಲಿ ವಿಸ್ತರಿಸಿಕೊಂಡಿದ್ದಾರೆ.

ಕೆ.ವಿ. ತಿರುಮಲೇಶ ಅವರ ಬರಹಗಳ ಅಧ್ಯಯನವು ಆಸಕ್ತರಿಗೆ ವ್ಯಾಪ್ತಿಯ ದೃಷ್ಟಿಯಿಂದ ಅವರ ಸೃಜನಶೀಲ ಬರಹಗಳಂತೆ ಸೃಜನೇತರ ಕೃತಿಗಳಂತೆ ಸಂಚಲನವನ್ನು ಸೃಷ್ಟಿ ಮಾಡಿವೆ.

ಸಮಕಾಲೀನ ಬೌದ್ಧಿಕ ಜಗತ್ತಿನ ಆಧುನಿಕತೆಯ ತೀಕ್ಷ್ಣತೆ, ವಿಶಿಷ್ಟತೆ ಹಾಗೂ ಸಾಹಿತ್ಯ ಜಗತ್ತಿನ ಆಗು–ಹೋಗುಗಳಿಗೆ ನಿರಂತರವಾಗಿ ಸ್ಪಂದಿಸುತ್ತಿರುವಂತಹ ಸಾಹಿತ್ಯವನ್ನು ನೀಡಿರುವುದು ಗಮನಾರ್ಹವಾದುದು. ಪ್ರಮುಖ ಬರಹಗಾರರಲ್ಲಿ ವಸ್ತುನಿಷ್ಟಗಳ ಆಯ್ಕೆಗಳು ಸಾಹಿತ್ಯ ಕ್ಷೇತ್ರದಲ್ಲಿ ಪ್ರಮುಖವಾದುದು ಎಂದು ಜೊತೆಗೆ ಆಯ್ದುಕೊಂಡ ಪ್ರಕಾರ ಮತ್ತು ಶೈಲಿಯ ನಿರೂಪಣೆ ಇವು ಮುಖ್ಯ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ತಮ್ಮ ಸಾಹಿತ್ಯದ ಮೂಲಕ ಕೃತಿಗಳಲ್ಲಿ ಸೃಜನಶೀಲ ಪಾತ್ರಗಳನ್ನು ಸೃಷ್ಟಿಸುವಂತೆ ಅನ್ಯೋಕ್ತಿಗಳಾಗಿ ಉಳಿಯಬೇಕು. ಅಂದರೆ ಪ್ರದೇಶದಿಂದ ಪ್ರದೇಶಕ್ಕೆ ಸಮಾಜ ಮತ್ತು ಸಂಸ್ಕೃತಿಯ ಸಂಕೇತಗಳನ್ನು ಬಿಂಬಿಸಬೇಕು. ಮೂರ್ತ–ಅಮೂರ್ತದ ರೂಪಗಳು ವರ್ತಮಾನದ ಚಾರಿತ್ರಿಕ ಸಂಗತಿಗಳನ್ನು ಸಂದರ್ಭಕ್ಕೆ ತಕ್ಕಂತೆ ಎದುರು ಮಾಡುವ ನಿಟ್ಟಿನಲ್ಲಿ ಸಾಹಿತ್ಯದಲ್ಲಿ ಹೊಸ ಬದಲಾವಣೆಯನ್ನು ಸೃಷ್ಟಿಸಿ, ಸಮಾಜ–ಸಂಸ್ಕೃತಿಯ ಪರಿವರ್ತನೀಯ ಹಾದಿಯಂತೆ ಕಾಲಗರ್ಭದಲ್ಲಿ ಕುತೂಹಲ ಉಂಟುಮಾಡುವಂತೆ, ಹಾಗೆಯೇ ವರ್ತಮಾನದ ದ್ವಂದ್ವಗಳನ್ನು, ವೈರುಧ್ಯಗಳನ್ನು ಬಗೆಹರಿಸುವಂತಹ ಗುಣವನ್ನು ಸಾಹಿತ್ಯವು ಸೃಷ್ಟಿಸಬೇಕು ಎಂದು ತಿಳಿಸಿದ್ದಾರೆ. ಒಟ್ಟಿನಲ್ಲಿ ಓದುಗ ಒಂದು ಕೃತಿಯನ್ನು ಓದಿದನೆಂದರೆ ಓದುಗನು ಬರವಣಿಗೆಯ ಗುಣಗಳನ್ನು ಅರಿಯುವುದರ ಜೊತೆಗೆ ಅದರ ಬಗೆಗಿನ ತಿಳುವಳಿಕೆಯನ್ನು, ವೈಚಾರಿಕ ಗ್ರಹಿಕೆಯನ್ನು ಜೀವನಾನುಭವದ ಧೋರಣೆಯಾಗಿಸುವುದು ತಾತ್ವಿಕ ನೆಲೆಯಿಂದಲೇ ಸೃಷ್ಟಿಯಾಗಬೇಕು ಎಂಬುದನ್ನು ತಮ್ಮ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ.

ಹೀಗೆ ಒಟ್ಟಿನಲ್ಲಿ ಕೆ.ವಿ. ತಿರುಮಲೇಶ ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಬಹುಮುಖ ಕೊಡುಗೆಯನ್ನು ನೀಡಿದ ಮಹತ್ವದ ಸಾಹಿತ್ಯಕಾರರಾಗಿ, ಕವಿಯಾಗಿ, ಸಾಹಿತಿಯಾಗಿದ್ದಾರೆ. ಕಾವ್ಯ, ವಿಮರ್ಶೆ, ಅನುವಾದ ಮತ್ತು ಭಾಷಾ ಅಧ್ಯಯನದ ಮೂಲಕ ಅವರು ಕನ್ನಡ ಸಾಹಿತ್ಯವನ್ನು ಹಸನುಮಾಡಿ ಸಮೃದ್ಧಿಗೊಳಿಸಿದ್ದಾರೆ. ಹೀಗೆ ಅವರ ಸಾಹಿತ್ಯ ಚಿಂತನೆ, ಭಾಷಾ ಪ್ರಯೋಗ ಮತ್ತು ವೈಚಾರಿಕತೆಯ ದೃಷ್ಟಿಯಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸದಾ ಕ್ರಿಯಾಶೀಲ, ಸೃಜನಶೀಲ ವ್ಯಕ್ತಿತ್ವವಾಗಿ ಕಂಡು ಬರುತ್ತಾರೆ. ಹೀಗಾಗಿ ಕನ್ನಡ ಸಾಹಿತ್ಯಕ್ಕೆ ಕೆ.ವಿ.

ತಿರುಮಲೇಶ ಅವರ ಬಹುಮುಖ ಕೊಡುಗೆ ಪ್ರಸ್ತುತವಾಗಿರುತ್ತದೆ.

**ಪರಾಮರ್ಶನ ಗ್ರಂಥಗಳು :**


- ಕಲ್ಬುರ್ಗಿ, ಎಂ.ಎಂ. *ಸಾಹಿತ್ಯ ಮತ್ತು ಸಂಸ್ಕೃತಿ.* ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ.
- ಕುವೆಂಪು ಭಾಷಾಭಾರತಿ ಪ್ರಕಟಿತ–ಆಧುನಿಕ ಕನ್ನಡ ಸಾಹಿತ್ಯಕ್ಕೆ ಅಧ್ಯಯನ ಕೃತಿಗಳು.
- ಮುಗಳಿ, ರಂ.ಶ್ರೀ. (1953). *ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ.* ಉಷಾ ಸಾಹಿತ್ಯ ಮಾಲೆ.
- ಶಿವರುದ್ರಪ್ಪ, ಜಿ.ಎಸ್. *ಕನ್ನಡ ಸಾಹಿತ್ಯದ ಪ್ರವೃತ್ತಿಗಳು.* ಸಪ್ನ ಬುಕ್‌ಹೌಸ್.
- ಶಿವಪ್ರಕಾಶ್, ಎಚ್.ಎಸ್. *ಆಧುನಿಕ ಕನ್ನಡ ಸಾಹಿತ್ಯ ಚಿಂತನೆಗಳು.* ಅಕ್ಷರ ಪ್ರಕಾಶನ,
- ತಿರುಮಲೇಶ, ಕೆ.ವಿ. (1986). *ಅವಧಿ.* ಅಕ್ಷರ ಪ್ರಕಾಶನ.
- ತಿರುಮಲೇಶ, ಕೆ.ವಿ. *ಆಧುನಿಕ ಕನ್ನಡ ಕಾವ್ಯದ ಹಿನ್ನೆಲೆ.*
- ತಿರುಮಲೇಶ, ಕೆ.ವಿ. (1978). *ಮುಖಾ ಮುಖಿ.* ಅಂಕಿತ ಪುಸ್ತಕ.
- ತಿರುಮಲೇಶ,ಕೆ.ವಿ. (1971). *ಮಹಾಪ್ರಸ್ಥಾನ.* ಸಾಹಿತ್ಯ ಪ್ರಕಾಶನ.